# ದಣಿವರಿಯದ ದೀಪ

ಇತಿಹಾಸ ಹಾಗೂ ಜನಪದರ ನಡುವೆ ಉಳಿದುಬಂದಿರುವ ಅನೇಕ ಪ್ರೇಮಕಥನಗಳು ನಮ್ಮ ನಡುವೆಯಿವೆ. ಅಂಥ ವಿಶಿಷ್ಟ ಕಥನಗಳಲ್ಲೊಂದು– ಶ್ರೀರಾಮಚಂದ್ರ ಭಾಂಜ್ ದೇವ್ ಹಾಗೂ ಸುಚಾರುದೇವಿ ಅವರದ್ದು. ಬೆಲ್ಗೇಡಿಯಾ ಅರಮನೆಯ ಪ್ರಣಯ ಗಾಥೆಗಳಲ್ಲಿ ಪ್ರಸಿದ್ಧವಾದ ರೋಚಕ ಕಥೆಯಿದು.

■ ಗೀತಾ ಸೀತಾರಾಮ್

'ಇದೋ ಈಗ ಬರುತ್ತಾನೆ ನನ್ನ ರಾಮ್! ನನ್ನೆದೆಯನ್ನಾಳುವ ಅರಸ... ನನ್ನ ಬದುಕಿನ ಪ್ರೇಮ ಜ್ಯೋತಿ!'

ಬೆಲ್ಗೇಡಿಯಾ ಅರಮನೆಯ ಬಿಸಿಲು ಮಚ್ಚಿನ ಮೇಲೆ ನಿಂತ ಸುಚಾರುದೇವಿ ನಿರೀಕ್ಷೆಯ ಕಣ್ಣುಗಳಿಂದ 'ರಾಜಬಾಡಿ'ಯ ಕಡೆ ನೋಡಿದಳು. ಶ್ರೀರಾಮಚಂದ್ರ ಭಾಂಜ್‌ದೇವ, ಪ್ರತಿದಿನ ಸಂಜೆ ಆರು ಗಂಟೆಗೆ ಒಡಿಸ್ಸಾದವರು 'ರಾಜಬಾಡಿ' ಎಂದು ಕರೆಯುತ್ತಿದ್ದ 'ಮಯೂರ ಭಾಂಜ್' ಅರಮನೆಯ ತಾರಸಿಗೆ ಬರುತ್ತಿದ್ದ. ಬರುವಾಗ, ಕೈಯಲ್ಲೊಂದು ಹಣತೆ ಹಿಡಿದೇ ಬರುವನು. ಅದನ್ನು ತಾರಸಿಯ ಅಂಚಿಗೆ ಇರಿಸುತ್ತಿದ್ದ, ತನ್ನ ಪ್ರಿಯತಮೆಗಾಗಿ! ತನ್ನ ಹೃದಯದರಗಿಣಿ ಸುಚಾರುವಿಗಾಗಿ! ರಾಜ ಮನೆವಾಳ್ತೆಯ ನಡುವೆ ಅವಳನ್ನು ಭೇಟಿಯಾಗಲು ಸಾಧ್ಯವಾಗದಿದ್ದರೂ, ಅವಳಿಗೆ ತಾನವಳನ್ನು ಪ್ರತಿಕ್ಷಣ ನೆನೆಯುತ್ತಿದ್ದೇನೆ ಎಂಬುದರ ಸಂಕೇತವಾಗಿ ಇಡುತ್ತಿದ್ದ ಆ ಪ್ರಣತಿಯನ್ನು! ಒಂದಲ್ಲ ಎರಡಲ್ಲ ಎಂಟು ವರ್ಷಗಳು ಪ್ರತಿನಿತ್ಯ ಸಂಜೆ, ಸತತವಾಗಿ ಉರಿಯಿತು, ಶ್ರೀರಾಮಚಂದ್ರ ಹಚ್ಚುತ್ತಿದ್ದ ಈ ದಣಿವರಿಯದ ದೀಪ!

ಪತಿ–ಪತ್ನಿಯರು ಒಟ್ಟಿಗಿರದೆ, ಹೀಗೆ ದೀಪದ ಸಂಕೇತದಲ್ಲಿ ಸಂಭಾಷಿಸುವ ಅನಿವಾರ್ಯವೇನಿತ್ತು? ಎಲ್ಲರಿಗೂ ಅಚ್ಚರಿ ಮೂಡಿಸುವ ಮಧುರ ವಿಸ್ಮಯಕಾರಿ ಸಂಬಂಧ ಈ ದಂಪತಿಗಳದ್ದು! ಎರಡು ಶತಮಾನಗಳ ರೋಚಕ ಕಥೆಗಳನ್ನು ಅಡಗಿಸಿಟ್ಟುಕೊಂಡಿರುವ ಈ 'ಬೆಲ್ಗೇಡಿಯಾ' ಅರಮನೆಯ ಕುರಿತು ಸ್ವಲ್ಪ ಗಮನವೀಯೋಣ.

***

ಹಚ್ಚ ಹಸುರಿನ ಹಿನ್ನೆಲೆಯಲ್ಲಿ 'ಜೊರೊಂಡಾ' ಹಾಗೂ 'ಬರೋಹಿದಾಣೆ' ಜಲಪಾತಗಳ ನಡುವೆ, ಭವ್ಯವಾಗಿ ನಿಂತಿರುವುದೇ 1904ರಲ್ಲಿ ಕಟ್ಟಲಾದ ಶ್ವೇತ ಭವನ 'ಬೆಲ್ಗೇಡಿಯಾ' ಅರಮನೆ. ಡೋರಿಕ್ ಕೋರಿನ್‌ಥಿಯನ್ ಶೈಲಿಯಲ್ಲಿ ವಿಕ್ಟೋರಿಯನ್ ಇಟ್ಟಿಗೆ, ಸುಣ್ಣದ ಕಲ್ಲು, ಗಾರೆಗಳ ಮಿಶ್ರಣದಿಂದ ಕಟ್ಟಲ್ಪಟ್ಟ ಈ ಅರಮನೆ, ಗ್ರೀಕ್ ಹಾಗೂ ವಿಕ್ಟೋರಿಯನ್ ಶಿಲ್ಪಶಾಸ್ತ್ರದ ಪ್ರತೀಕ.

ಈ ಅರಮನೆಗೆ ಬರಬೇಕಾದರೆ ಒಡಿಸ್ಸಾದ ಹಿಂದಿನ ರಾಜಧಾನಿ ಬರಿಪಾದ ಎಂಬಲ್ಲಿಗೆ ಬರಬೇಕು. ಕಲ್ಕತ್ತೆಯಿಂದ ಸುಮಾರು ಇನ್ನೂರು ಕಿಲೋಮೀಟರ್ ದೂರದಲ್ಲಿರುವ ಈ ಅರಮನೆ 'ಮಯೂರ ಭಾಂಜ್' ರಾಜವಂಶಕ್ಕೆ ಸೇರಿದೆ. ಈ ಅರಮನೆಯ ಕಲಾತ್ಮಕ ಗೋಡೆಗಳು, ಕಮಾನು ಗಾಜಿನ ಕಿಟಕಿಗಳು, ಅದ್ಭುತ ಕೆತ್ತನೆಯ ಕಂಬಗಳು, ರಾಜರ ಒಡ್ಡೋಲಗ, ಅಂತಃಪುರ, ಉಪ್ಪರಿಗೆಗಳು, ಈಜು ಕೊಳಗಳು, ರಮ್ಯ ಉದ್ಯಾನವನಗಳು, ಕಲಾವೇದಿಕೆ, ಗ್ರಂಥಭಂಡಾರ... ಒಂದೇ ಎರಡೇ ಇಲ್ಲಿನ ಕಥೆ ಹೇಳುವ ಸಾಧನಗಳು.

ಅರಮನೆಯ ಗೋಡೆಯ ಮೇಲಿರುವ ತೈಲವರ್ಣ ಚಿತ್ರಗಳು ಹತ್ತೊಂಬತ್ತು ಹಾಗೂ ಇಪ್ಪತ್ತನೆಯ ಶತಮಾನದ ಕಥೆಗಳನ್ನೆಲ್ಲಾ ವರ್ಣಿಸುತ್ತವೆ. ಗೋಡೆಗೆ ತಗಲಿಸಿರುವ ಕಾಡೆಮ್ಮೆ, ಚಿರತೆ, ಹುಲಿಯ ಮುಖಗಳು ಹಾಗೂ ಹದಿನೆಂಟು ಅಡಿಯ ಮೊಸಳೆಯ ಅಸ್ಥಿಪಂಜರ, ಅಳಿದುಹೋದ ಮಹಾರಾಜರ ಶಿಕಾರಿಗಳನ್ನು ಸಾಕ್ಷೀಕರಿಸುತ್ತವೆ. ಜಿಂಕೆಯ ಮುಖಗಳು,